ಸಂಪುಟ: ೩ ಸಂಚಿಕೆ: ೫ ಪುಟ: ೪ ಅಕ್ಟೋಬರ್ ೨೦೧೮
* ಆಂತರಿಕ ಪ್ರಸರಣಕ್ಕೆ ಮಾತ್ರ

ಅರಿವು ಶಾಲೆಯ ಮಾಸಪತ್ರಿಕೆ

# ಅಂಗಳ

ಮಾಹಿತಿ, ಜ್ಞಾನ, ಸೃಜನಶೀಲತೆಗೊಂದು ವೇದಿಕೆ

ಸಂಪಾದಕರು: ಡಾ.ಎಂ.ಸಿ.ಮನೋಹರ ಸಂಚಿಕೆ ಸಂಪಾದಕರು: -ಸುಮನ್ ಎಂ.ಸಿ.
www.arivu.org | e-mail: info@arivu.org ೯೪೮೨೨ ೭೭೮೭೨



## ಶಿಕ್ಷಕರ ದಿನಾಚರಣೆಯಲ್ಲಿ ಮಕ್ಕಳನ್ನು ಎದುರುಗೊಳ್ಳುವ ಕಾತರ

ಭಾರತದ ರಾಷ್ಟ್ರಪತಿ ಆಗಿದ್ದ ಸರ್ವಪಲ್ಲಿ ರಾಧಾಕೃಷ್ಣನ್ ಗೌರವಾರ್ಥವಾಗಿ ಅವರ ಜನ್ಮ ದಿನವಾದ ಸೆಪ್ಟೆಂಬರ್ ೫ರಂದು ದೇಶಾದ್ಯಂತ ಶಿಕ್ಷಕರ ದಿನವನ್ನು ಆಚರಿಸಲಾಗುತ್ತದೆ. ಆ ದಿನ ಎಲ್ಲರೂ ಶಿಕ್ಷಕರಿಗೆ ಶುಭಾಶಯ ಕೋರುತ್ತಾರೆ. ಸರ್ಕಾರದ ಮಟ್ಟದಲ್ಲೂ ಅದ್ದೂರಿಯಾಗಿ ಕಾರ್ಯಕ್ರಮಗಳು ಆಚರಿಸಲ್ಪಡುತ್ತವೆ.
ಸೆಪ್ಟೆಂಬರ್ ೫ ಪ್ರತಿಯೊಬ್ಬ ಶಿಕ್ಷಕರಿಗೆ ತಮ್ಮ ವೃತ್ತಿ ಆಯ್ಕೆ ಸರಿಯಾದದ್ದು ಎಂಬ ಆತ್ಮವಿಶ್ವಾಸ ಮತ್ತು ಆತ್ಮತೃಪ್ತಿ ಕೊಡುವ ದಿನ. ಅಂತೆಯೆ, ಅಂದು ನಮಗೂ ಮಕ್ಕಳನ್ನು ಎದುರುಗೊಳ್ಳುವ ಕಾತರ. ಅಂದು ನಾವು ಶಾಲೆಯ ಗೇಟಿನ ಬಳಿ ಬರುವುದನ್ನೇ ಕಾದು ನಿಲ್ಲುವ ನಮ್ಮ ಮಕ್ಕಳು ವಾಹನ ಪಾರ್ಕಿಂಗ್ ಮಾಡಲೂ ಬಿಡದಂತೆ ನಮ್ಮನ್ನು ಅಪ್ಪಿಕೊಳ್ಳುತ್ತಾರೆ. ತಾವೇ ತಯಾರಿಸಿದ ಪುಟ್ಟ ಪುಟ್ಟ ಶುಭಾಶಯ ಪತ್ರಗಳನ್ನು ನೀಡಲು ನಾ ಮುಂದು ತಾ ಮುಂದು ಎಂಬಂತೆ ಮುಗಿಬೀಳುತ್ತಾರೆ. ಮಕ್ಕಳೆಲ್ಲರೂ ಮಾತನಾಡಿಕೊಂಡು, ಇರುವ ಕಡಿಮೆ ಅವಧಿಯಲ್ಲಿಯೇ ತರಗತಿ ಕೊಠಡಿಗಳನ್ನು ಸ್ವಚ್ಛಗೊಳಿಸಿ, ಒಪ್ಪ ಓರಣ ಮಾಡಿ, ಕಪ್ಪುಹಲಗೆಯ ಮೇಲೆ ಬಣ್ಣ ಬಣ್ಣದ ಬಳಪದಲ್ಲಿ ಚಿತ್ತಾರ ಬಿಡಿಸಿ, ಎಲ್ಲ ಶಿಕ್ಷಕರಿಗೂ ಶುಭಾಶಯ ಕೋರುತ್ತಾರೆ. ಸೃಜನಾತ್ಮಕವಾಗಿ ಶೃಂಗರಿಸಿದ ಆ ಕೊಠಡಿ ಉದ್ಘಾಟನೆಯನ್ನು ತಮ್ಮ ತರಗತಿ ಶಿಕ್ಷಕರು ಹಾಗೂ ಕೆಲವೊಮ್ಮೆ ಮುಖ್ಯ ಶಿಕ್ಷಕರೇ ಮಾಡಬೇಕು ಎಂದು ಮುಂಚೆಯೇ ಪ್ರೀತಿಯಿಂದ ತಾಕೀತು ಮಾಡಿರುತ್ತಾರೆ.
ಅಂದು ಮಕ್ಕಳೇ ಯೋಚನೆ, ಯೋಜನೆ ರೂಪಿಸಿ ಕಾರ್ಯರೂಪಕ್ಕೆ ತಂದ ಕೌಶಲವನ್ನು ದೊಡ್ಡವರಾದ ನಾವೂ ಕಲಿಯುವಂತಿತ್ತು. ಮಕ್ಕಳ ನಿರೂಪಣೆ ಕೌಶಲ, ಪ್ರಸ್ತುತಪಡಿಸಿದ ಕಾರ್ಯಕ್ರಮಗಳು ಉತ್ತಮವಾಗಿದ್ದವು.

ಪುಟ ೨ಕ್ಕೆ

## ಡಿಡಿಪಿಐ, ಬಿಇಒ ಮೆಚ್ಚುಗೆ

ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾದ ಪಾಂಡುರಂಗ ಹಾಗೂ ಮೈಸೂರು ತಾಲೂಕು ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ ಕೃಷ್ಣ ಅವರು ದಿನಾಂಕ ೧೪.೯.೨೦೧೮ರಂದು ನಮ್ಮ ಶಾಲೆಗೆ ಭೇಟಿ ನೀಡಿದ್ದರು. ಶಾಲೆಯ ಚಟುವಟಿಕೆಗಳನ್ನು ವೀಕ್ಷಿಸಿದ ಅವರು, ವಿಷಯವಾರು ಸಂಪನ್ಮೂಲ ಕೇಂದ್ರಗಳಿಗೆ ಭೇಟಿ ನೀಡಿ ಮಾಹಿತಿ ಪಡೆದರು. ನಂತರ 'ಅಂಗಳ' ಪತ್ರಿಕೆಯ ಸೆಪ್ಟೆಂಬರ್ ಸಂಚಿಕೆಯನ್ನು ಬಿಡುಗಡೆ ಮಾಡಿದರು. ಈ ವೇಳೆ ಮಕ್ಕಳು ಸುಶ್ರಾವ್ಯವಾಗಿ ಹಾಡಿದ ಗೀತೆಗಳನ್ನು ಕೇಳಿ ತಲೆದೂಗಿದರು. ಅರಿವು ಶಾಲೆಯ ಬಗ್ಗೆ ಉತ್ತಮ ಅಭಿಪ್ರಾಯವಿರುವುದನ್ನು ಕೇಳಿದ್ದೆವು. ಆದರೆ, ಈ ದಿನ ಖುದ್ದು ಶಾಲೆಗೆ ಭೇಟಿ ನೀಡಿ ಇಲ್ಲಿನ ಚಟುವಟಿಕೆಗಳನ್ನು ವೀಕ್ಷಿಸಿದ್ದು ಮತ್ತು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು

ಪುಟ ೩ಕ್ಕೆ



## ಬದ್ಧತೆ, ಆಸಕ್ತಿಯಿಂದ ಈಜು ಕಲಿತ ಚಿಣ್ಣರು

ಪ್ರತಿ ವರ್ಷದಂತೆ, ಈ ವರ್ಷವೂ ಈಜು ತರಬೇತಿ ಇತ್ತು. ಸುಮಾರು ೨೦ ದಿನಗಳ ಕಾಲ ಸಂಜೆ ೫ ರಿಂದ ೬ರವರೆಗೆ ತರಬೇತಿಯನ್ನು ನಡೆಸಲಾಗುತ್ತಿತ್ತು. ಸುಮಾರು ೪೦ ಮಕ್ಕಳು ಮತ್ತು ೪ ಶಿಕ್ಷಕರು ಈ ಬಾರಿ ತರಬೇತಿಯ ಭಾಗವಾಗಿದ್ದರು. ೩ ವರ್ಷಗಳ ನಂತರ ನಮಗೆ ಸರಸ್ವತಿಪುರಂನ ವಿಶ್ವವಿದ್ಯಾಲಯದ ಈಜುಕೊಳದಲ್ಲಿ ಅವಕಾಶ ಸಿಕ್ಕಿದ್ದು, ಇದಕ್ಕೆ ಕಾರಣರಾದ ಕೃಷ್ಣಯ್ಯ ಅವರಿಗೆ ಧನ್ಯವಾದ ಹೇಳಲೇಬೇಕು. ಈಜುಕೊಳದಲ್ಲಿ ಈಜು ಕಲಿಸಲು ಅವಕಾಶ ಕೊಡಿಸಿದ್ದಲ್ಲದೆ, ನಮಗೆ ಪಾಸ್‌ಗಳನ್ನು ರಿಯಾಯಿತಿ ದರದಲ್ಲಿ ಕೊಡಿಸಿದ್ದರು. ಹಿರಿಯ ಈಜು ತರಬೇತುದಾರರಾದ ಪುಟ್ಟಸ್ವಾಮಿ ಮತ್ತು ಈಜು ಕೊಳದ ಮುಖ್ಯಸ್ಥರಾದ ದೀಪಕ್ ಅವರ ತರಬೇತಿಯಲ್ಲಿ ನಮ್ಮ ಶಾಲೆಯ ಮಕ್ಕಳು ಕೇವಲ ೨೦ ದಿನದಲ್ಲಿ ಈಜು ಕಲಿತರು. ತರಬೇತಿಗೆ ಬಂದ ೧ ಮತ್ತು ೨ನೇ ತರಗತಿ ಮಕ್ಕಳನ್ನು ಮೊದಲ



ಒಂದು ವಾರ ನೀರಿನಲ್ಲಿ ತಮ್ಮ ಪಾಡಿಗೆ ಆಡಲು ಬಿಟ್ಟು, ಅವರೊಂದಿಗೆ ತಾವೂ ಆಡುತ್ತಾ, ಅವರ ವಿಶ್ವಾಸವನ್ನು ಗಳಿಸಿ ನಂತರ ಈಜಿನ ಒಂದೊಂದೇ ಪಟ್ಟುಗಳನ್ನು ಹೇಳಿಕೊಡುತ್ತಾ ಅವರಿಗೆ ಯಾವುದೇ ರೀತಿಯಲ್ಲಿ ಭಯಪಡಿಸದೇ ನಮ್ಮ ಶಾಲೆಯ ಮೂಲ ಉದ್ದೇಶವಾದ ಒತ್ತಡ ರಹಿತ ಕಲಿಕೆಯ ಮುಖಾಂತರ ಈಜು ಕಲಿಸಿದರು. ಪ್ರತಿ ದಿನ ಬರುತ್ತಿದ್ದ ಕೆಲವು ಪೋಷಕರು ಇದೇನು ಬರೇ ಆಟವಾಡಿಸುತ್ತಿದ್ದಾರೆ, ಈಜು ಕಲಿಸುವುದು ಯಾವಾಗ, ಆಗಲೇ ೧೦ ದಿನ ಕಳೆದಿದ್ದಾರೆ, ಇನ್ನು ೧೦ ದಿನದಲ್ಲಿ ಹೇಗೆ ಈಜು ಕಲಿಸುತ್ತಾರೆ ಎಂಬಿತ್ಯಾದಿ ಆತಂಕಗಳನ್ನು ತೋರಿಸಿದ್ದೂ ಉಂಟು. ನಂತರದ ದಿನಗಳಲ್ಲಿ ೮-೧೦ ಅಡಿ ಆಳದ ಕೊಳಗಳಿಗೆ ಮಕ್ಕಳನ್ನು, ಬಾಣಲೆಗೆ ವಡೆ ಹಾಕುವ ರೀತಿ ಹಾಕುತ್ತಿದ್ದರೆ, ಪೋಷಕರ ಮುಖ ಆತಂಕದಿಂದ ಕೂಡಿರುತ್ತಿತ್ತು.

ಪುಟ ೩ಕ್ಕೆ

# ನಮ್ಮ ದಸರಾ ಹಬ್ಬ

ಎಲ್ಲರಲ್ಲೂ ಖುಷಿ ನೀಡುವ ಹಬ್ಬ
ಅದು ನಮ್ಮದೇ ಹಬ್ಬ
ಎಲ್ಲರನ್ನೂ ಒಟ್ಟುಗೂಡಿಸುವ
ರಸ್ತೆಯ ಬದಿಯ ಕಂಬಗಳಿಗೆ
ದೀಪದ ಅಲಂಕಾರ ಮಾಡುವ ಹಬ್ಬ.
ದೇಶ ವಿದೇಶಗಳಿಂದೆಲ್ಲ ಜನರು
ಬಂದು ನೋಡುತ್ತಾರೆ ನಮ್ಮ ಹಬ್ಬ
ಕಣ್ಣ ತುಂಬಿ ಸಂತಸಿಸುತ್ತಾರೆ
ಅದೇ ನಮ್ಮ ಹಬ್ಬ ದಸರಾ ಹಬ್ಬ.



ಆಹಾ ಏನು ಉತ್ಸಾಹ
ಆ ನಮ್ಮ ಹಬ್ಬ ನೋಡಲು
ಒಬ್ಬ ಕುರ್ಚಿ ಮೇಲೆ ನಿಂತರೆ
ಮತ್ತೊಬ್ಬ ತನ್ನ ಕೂಸಿಗೆ ಕಾಣಲೆಂದು
ಹೆಗಲನ್ನೇ ಕುರ್ಚಿ ಮಾಡಿ ಕೂರಿಸಿ
ತೋರುವವ
ಅಂಬಾರಿ ಬರುವಾಗ
ಮಕ್ಕಳ ಮುಖದಲ್ಲಿ ನಗು
ನೋಡಲು ಬಲು ಸೊಬಗು
ಸಾಯುವ ವಯಸ್ಸಿನವನು ನೋಡುಗನೇ
ಇನ್ನು ಕೆಲವರು ಸ್ಟೇಟಸ್, ಫೇಸ್‌ಬುಕ್ಕಿಗೆ
ಒಟ್ಟಿನಲ್ಲಿ ನಮ್ಮ
ಹಬ್ಬನೇ ಹಬ್ಬ ಕಣ್ರೆ
ಎಲ್ಲರ ಕಣ್ಣು, ಮನಸ್ಸು
ತುಂಬುತೆ



**–ಶೀತಲ್,** ೯ನೇ ತರಗತಿ

# ಮರೆಯಲಾಗದ ರಜೆಯ ಮೊದಲ ದಿನ



ಈ ಬಾರಿಯ ದಸರಾ ರಜೆ ನನಗೆ ಮಜವಾಗಿತ್ತು. ನಮ್ಮ ಮನೆಯ ಹತ್ತಿರವೇ ಮೈತ್ರಿ ಮನೆಯೂ ಇದೆ. ಈ ರಜೆಯಲ್ಲಿ ಇಬ್ಬರೂ ಒಟ್ಟಿಗೆ ಆಟವಾಡುತ್ತಿದ್ದೆವು, ಬರೆಯುತ್ತಿದ್ದೆವು. ಒಂದು ದಿನ ಬೆಳಗ್ಗೆ ೧೧ ಗಂಟೆ ಹೊತ್ತಿಗೆ ನಾನು, ಮೈತ್ರಿ ಸೈಕಲ್‌ನಲ್ಲಿ ಪಾರ್ಕ್‌ಗೆ ಹೋದೆವು. ಸ್ವಲ್ಪ ಸಮಯ ಆಟವಾಡಿ, ಮಾತಾಡಿ ಅಲ್ಲಿಂದ ಅಂಗಡಿಯಲ್ಲಿ ಉಲ್ಲನ್ ತೆಗೆದುಕೊಂಡು ಮೈತ್ರಿ ಮನೆಯ ಕಡೆ ಹೊರಟೆವು. ಅಲ್ಲಿ ನೋಡಿದರೆ ಗೇಟ್ ಮುಂದೆ ಒಂದು ಹಸು ಅಡ್ಡವಾಗಿ ಮಲಗಿತ್ತು. ಇನ್ನೊಂದು ಗೇಟ್ ಮುಂದೆ ಆರು ನಾಯಿಗಳು ನಮ್ಮನ್ನೇ ನೋಡುತ್ತಿದ್ದವು. ನಾವು ಅಲ್ಲಿಂದ ಹೆದರಿ ಸೈಕಲ್ ಹೊಡೆದು ಪಕ್ಕದ ಬೀದಿಗೆ ಬಂದು ನಿಂತೆವು. ಸ್ವಲ್ಪ ಹೊತ್ತಾದ ಮೇಲೆ ಇನ್ನೊಂದು ದಾರಿ ಹಿಡಿದು ಅವಳ ಮನೆಗೆ ಹೋದರೆ ಅಲ್ಲೊಂದು ಗೂಳಿ ಅಡ್ಡವಾಗಿ ನಿಂತಿತ್ತು. ನಮ್ಮನ್ನು ಗುದ್ದೇ ಬಿಡುವುದು ಅಂತ ಅನ್ನಿಸುತ್ತಿತ್ತು. ಹೇಗೋ ಅದರಿಂದ ತಪ್ಪಿಸಿಕೊಂಡು ಮೈತ್ರಿ ಮನೆಯ ಮುಂದೆ ಬಂದರೆ, ಆ ಪ್ರಾಣಿಗಳು ಅಲ್ಲೇ ಇದ್ದವು. ನಾವೂ ಹಠ ಬಿಡದೆ ಪಕ್ಕದ ಮನೆಯ ಗೇಟ್ ಹತ್ತಿ, ಎರಡು ಕಾಂಪೌಂಡ್ ಹಾರಿ ಮೈತ್ರಿ ಮನೆಗೆ ಹೋಗಿ ಸೇರಿದೆವು. ಭಯವೂ ಆಗುತಿತ್ತು, ಯಾರಾದರು ನಮ್ಮನ್ನು ಕಳ್ಳರೆಂದು ಕೊಂಡರೆ ಅಂತ. ಅಬ್ಬಾ! ಎಷ್ಟು ಸಾಹಸ ಮಾಡಿದೆವು ಅನ್ನಿಸಿತು, ಮಜವೂ ಇತ್ತು. ನನಗೆ ಮರೆಯಲಾಗದ ದಿನವಾಯಿತು.



**–ಶ್ರೀವಿದ್ಯಾ,** ೬ನೇ ತರಗತಿ

# ಸಂಪಾದಕೀಯ


ನಮ್ಮ ಅಂಗದ ೨೦೧೯–೨೦ನೇ ಸಾಲಿನ ಐದನೇ ಸಂಚಿಕೆ ಇದಾಗಿದೆ. ಈ ಸಂಚಿಕೆಯ ವಿಶೇಷವೆಂದರೆ, ರಜೆ ದಿನಗಳಲ್ಲೂ ಮಕ್ಕಳು ತಮ್ಮ ಕ್ರಿಯಾತ್ಮಕ ಬರವಣಿಗೆಗಳನ್ನು ನೀಡಿರುವುದು. ಇದು ಪ್ರಶಂಸನೀಯವೆನಿಸಿದೆ. ಕಳೆದ ತಿಂಗಳ ಅಂಗಳ ಪತ್ರಿಕೆ ಬಿಡುಗಡೆ ಮಾಡಲು ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾದ ಪಾಂಡುರಂಗ ಮತ್ತು ಮೈಸೂರು ತಾಲೂಕು ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ ಕೃಷ್ಣ ಅವರು ನಮ್ಮ ಶಾಲೆಗೆ ಆಗಮಿಸಿದ್ದರು. ಶಾಲೆಯ ಬಗ್ಗೆ ಉತ್ತಮ ಮಾತುಗಳನ್ನಾಡಿ, ಮಕ್ಕಳ ಕಲಿಕೆಯನ್ನು ಕಂಡು ಸಂತಸಪಟ್ಟರು. ಶಿಕ್ಷಕರ ದಿನಾಚರಣೆಯಂದು ಎಲ್ಲ ಶಿಕ್ಷಕರನ್ನೂ ಶ್ಲಾಘಿಸಿ ಗೌರವಿಸಿದ್ದು ಖುಷಿ ತಂದಿತು. ‘ಕಸ’ ವಿಷಯವನ್ನು ಈ ಬಾರಿಯ ವಿಷಯಾಧಾರಿತ ಕಲಿಕೆಯನ್ನಾಗಿ ಆರಿಸಿಕೊಂಡಿದ್ದೂ, ಮಕ್ಕಳ ಜೊತೆ ಪೋಷಕರೂ ಕಲಿಕೆಯಲ್ಲಿ ತೊಡಗಿಸಿಕೊಂಡಿರುವುದು ವಿಶೇಷವೆನಿಸಿದೆ. ಹಾಗೆಯೆ, ಕಳೆದ ಎರಡು ತಿಂಗಳಿಂದ ನಮ್ಮ ಮಕ್ಕಳಿಗೆ ತೋಟಗಾರಿಕೆಯ ಅನುಭವಗಳನ್ನು ಪಡೆದುಕೊಳ್ಳಲು ಆಸಕ್ತ ಪೋಷಕರು ನಮ್ಮ ಜೊತೆ ಕೈಜೋಡಿಸಿರುವುದು ಸಹಕಾರಿಯಾಗಿದೆ. ಇದರ ಮುಂದಾಳತ್ವ ವಹಿಸಿಕೊಂಡಿರುವ ಡೋರಿ ಅಕ್ಕ ಅವರಿಗೆ ಧನ್ಯವಾದಗಳು. ಈ ಬಾರಿ, ಜೊಹಾನಾ ತಿಲಕ್ ಹಾಗೂ ಸಿಲ್ವಾನ್ ಹೊಪ್ಪೆ ಎಂಬ ಜರ್ಮನ್ ಸ್ವಯಂಸೇವಕರು ನಮ್ಮ ಶಾಲೆಗೆ ಬಂದಿದ್ದಾರೆ. ನಮ್ಮ ಶಿಕ್ಷಣ ಪದ್ಧತಿ ಮತ್ತು ಸಂಸ್ಕೃತಿಯನ್ನು ಅರಿಯಲು ಬಂದವರಿಗೆ ಅರಿವು ಶಾಲೆ ಪ್ರೀತಿಯಿಂದ ಸ್ವಾಗತಿಸಿದೆ. ಈ ಬಾರಿಯ ಸಂಚಿಕೆಯನ್ನು ನಿಮ್ಮ ಮುಂದಿಡಲು ಸಹಾಯ ಮಾಡಿದ ಎಲ್ಲ ನನ್ನ ಸಹೋದ್ಯೋಗಿಗಳಿಗೆ ಧನ್ಯವಾದಗಳು.



**–ಸುಮನ್ ಎಂ.ಸಿ.,** ಸಂಚಿಕೆ ಸಂಪಾದಕಿ

# ನನ್ನ ಬೆಕ್ಕು

ನಮ್ಮ ಮನೆಯ ಬೆಕ್ಕು
ಅದಕೆ ತುಂಬಾ ಸೊಕ್ಕು
ಹಾಲು ಕೊಡ್ತೀನಿ ನೆಕ್ಕು
ಓಡಿ ಹೋಗಿ ಹೊಕ್ಕು!




**_ ಸಂಪದ,** ೨ನೇ ತರಗತಿ

# ಸುಂದರ ಗುಲಾಬಿ



ಗುಲಾಬಿ ಗುಲಾಬಿ
ನಿನಗೆ ಹೇಗೆ ಕೆಂಪು ದಳಗಳು ಬಂದಿತು?
ನಿನ್ನ ಎಲೆ ತುಂಬಾ ಚೆನ್ನ
ನಿನ್ನನ್ನು
ಮುಡಿದುಕೊಳ್ಳಲು
ಚೆನ್ನ
ದೇವರ ಪೂಜೆಗೂ
ನೀ ಚೆನ್ನ.



**–ಅದಿತಿ ಆರ್.ಪಿ.,** ೨ನೇ ತರಗತಿ.



# ತುಂಬಾ ಖುಷಿ ಆಯ್ತು

ನಾವು ೧ನೇ ತರಗತಿಯ ಗೆಳೆಯರು, ಅಣ್ಣ ಹಾಗೂ ಅಕ್ಕಂದಿರ ಜೊತೆ ದೇವರಾಜ ಮಾರುಕಟ್ಟೆಗೆ ಹೋಗಿದ್ದೆವು. ಅಲ್ಲಿ ಹಣ್ಣುಗಳು, ತರಕಾರಿಗಳು ಮತ್ತು ಹೂವುಗಳನ್ನು ಮಾರಾಟ ಮಾಡುತ್ತಿದ್ದರು. ಅಲ್ಲಿ ತುಂಬಾ ಜನರು ಇದ್ದರು. ನನಗೆ ತುಂಬಾ ಖುಷಿ ಆಯಿತು. ಅಲ್ಲಿ ಒಬ್ಬರು ಅಣ್ಣ ಚಾಕೊಲೇಟ್ ಕೊಟ್ಟರು.



**–ದರ್ಶಿತ್ ಎಸ್.,** ೧ನೇ ತರಗತಿ

# ಮಕ್ಕಳನ್ನು ಎದುರುಗೊಳ್ಳುವ ಕಾತರ

ಮೊದಲ ಪುಟದಿಂದ.....

ಶಿಕ್ಷಕರಿಗೂ ಸವಾಲಿನ ಚಟುವಟಿಕೆಗಳನ್ನು ರೂಪಿಸಿ ಸಮಸ್ಯೆಗಳನ್ನು ಬಿಡಿಸಲು ಕೊಟ್ಟಿದ್ದು ನಿಜಕ್ಕೂ ಕಷ್ಟಕರವಾಗಿತ್ತು. ಎಲ್ಲರೂ ಸೇರಿ ಚುರುಮುರಿ ಮಾಡಿ, ಸಿಹಿ ಹಂಚಿದ್ದು ಖುಷಿ ನೀಡಿತು. ಎಲ್ಲ ತರಗತಿಗಳ, ಎಲ್ಲ ಕಾರ್ಯಕ್ರಮಗಳನ್ನು ನೋಡುವುದೇ ಒಂದು ಸವಾಲು. ಏಕೆಂದರೆ ಮಕ್ಕಳ ಉತ್ಸಾಹ, ಸೃಜನಶೀಲತೆ ಎಷ್ಟಿರುತ್ತದೆ ಎಂದರೆ, ಆ ಕಾರ್ಯಕ್ರಮಗಳ ಪಟ್ಟಿ ಬೆಳೆಯುತ್ತಲೇ ಇರುತ್ತದೆ. ಶಾಲೆಯಿಂದಲೂ ಶಿಕ್ಷಕರನ್ನು ಗೌರವಿಸಿದರು. ಪೋಷಕರು ಸಹ ಸಿಹಿ ಮತ್ತು ಉಡುಗೊರೆ ನೀಡಿದರು. ಒಟ್ಟಿನಲ್ಲಿ ಶಿಕ್ಷಕರ ದಿನಾಚರಣೆ ನಮ್ಮ ಶಾಲೆಯಲ್ಲಿ ಅರ್ಥಪೂರ್ಣವಾಗಿತ್ತು.

**। ಮಂಜುಳಾ ಎಂ. ,** ಮುಖ್ಯ ಶಿಕ್ಷಕಿ



# ಹೂಗಳು

ಹೂವೆ ಹೂವೆ ನೆಚ್ಚಿನ ಹೂವೆ
ಬಣ್ಣ ಬಣ್ಣದ ಸುಂದರ ಹೂವೆ
ದುಂಬಿಗಳಿಗೆ ಆಹಾರ ನೀ
ಸಣ್ಣ ಮಕ್ಕಳಿಗೆ ಇಷ್ಟ ನೀ
ಎಲ್ಲದಕ್ಕೂ ಬೇಕು ನೀ
ನೋವು ದುಃಖವನು
ಮರೆಸುವೆ ನೀ
ಬಣ್ಣ ಬಣ್ಣದಿಂದ
ಆಕರ್ಷಿಸುವೆ ನೀ
ಎಲ್ಲ ಸಂಭ್ರಮಗಳಿಗೂ
ಬೇಕು ನೀ



**–ಅನ್ವಿತ,** ೮ನೇ ತರಗತಿ

## ಮಕ್ಕಳಿಗೆ ಚುರುಮುರಿ ಮಾಡಿದೆ..

'ಹಿರಿಯಕ್ಕನ ಚಾಳಿ ಮನೆಮಂದಿಗೆಲ್ಲ' ಎಂಬಂತೆ ನನ್ನ ೨ನೇ ತರಗತಿ ಮಕ್ಕಳು ಉಳಿದ ತರಗತಿ ಮಕ್ಕಳು ಚುರುಮುರಿ ಮಾಡಿಕೊಂಡು ತಿನ್ನುವುದನ್ನು ನೋಡಿ ತಾವೂ ಮಾಡಿಕೊಂಡು ತಿನ್ನಬೇಕೆಂದು ನಿರ್ಧರಿಸಿದರು. ಅದರಂತೆ, ತಮ್ಮಲ್ಲೇ ಗುಂಪು ಮಾಡಿಕೊಂಡು ಮನೆಯಿಂದ ಪದಾರ್ಥಗಳನ್ನು ತರಲು ಪಟ್ಟಿ ಮಾಡಿಕೊಂಡರು. ಈ ವಿಚಾರ ನನಗೆ ಪೋಷಕರಿಂದ ತಿಳಿದು ಆಶ್ಚರ್ಯವಾಯಿತು.



ಮಾರನೆಯ ದಿನ ಎಲ್ಲ ಮಕ್ಕಳನ್ನು ಸೇರಿಸಿ ಚುರುಮುರಿ ಮಾಡೋಣವೆಂದು ಹೇಳಿ ಪ್ರತಿಯೊಂದು ಮಗುವಿಗೂ ಒಂದೊಂದು ಪದಾರ್ಥ ತರಲು ಹೇಳಿದೆನು. ಈರುಳ್ಳಿ ಸಿಪ್ಪೆ ಬಿಡಿಸಲು, ಕತ್ತರಿಸಲು, ಪಾತ್ರೆಗಳನ್ನು ತರಲು ಮಕ್ಕಳಿಗೆ ಜವಾಬ್ದಾರಿ ನೀಡಿ ಚುರುಮುರಿ ಮಾಡು ವುದನ್ನು ತೋರಿಸಿಕೊಟ್ಟೆನು. ಮಕ್ಕಳು ಖುಷಿಯಿಂದ ಭಾಗವಹಿಸಿ ಚುರುಮುರಿ ಮಾಡುವ ವಿಧಾನವನ್ನು ಹಂಚಿಕೊಳ್ಳುವುದರ ಮೂಲಕ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು.

–ಚೇತನ ಭಟ್, ಶಿಕ್ಷಕಿ

# ಬಾಳೆಕಾಯಿ ಬಾಳೆಹಣ್ಣಾಗುವ ಮಾರ್ಗ

**ದೇವರಾಜ ಮಾರುಕಟ್ಟೆ ಭೇಟಿ ಕಲಿಸಿದ ಪಾಠ**

೩ನೇ ತರಗತಿ ಮಕ್ಕಳೆಲ್ಲರೂ ದೇವರಾಜ ಮಾರುಕಟ್ಟೆಗೆ ಭೇಟಿ ನೀಡಿದೆವು. ನಾವೆಲ್ಲರೂ ಕೆಂಪು ಮೂಲಂಗಿ, ಪಡವಲ ಕಾಯಿ, ಬೇಬಿ ಕಾರ್ನ್, ಬೇಬಿ ಟಮೊಟೋ ನೋಡಿದೆವು. ಬಾಳೆಹಣ್ಣಿನ ಅಂಗಡಿಯಲ್ಲಿ ವಿಜಿ ಅಣ್ಣ ನಮ್ಮನ್ನು ಮಾತನಾಡಿಸಿದರು. ಅವರು ನಮಗೆ ಕಥೆ ಹೇಳಿದರು. ಈಗ ನಮಗೆಲ್ಲರಿಗೂ ಬಿಗ್ ಬಜಾರ್ ಗೊತ್ತು. ಆದರೆ ಆಗಿನ ಕಾಲದಲ್ಲಿ ಮಾರುಕಟ್ಟೆಯೇ ಬಿಗ್ ಬಜಾರ್ ಆಗಿತ್ತು ಅಂತ ತಿಳಿಸಿದರು. ನೀವೆಲ್ಲರೂ ಇಷ್ಟು ದೊಡ್ಡ ಬಿಗ್ ಬಜಾರ್ ನೋಡಿದ್ದೀರಾ ಅಂತ ಕೇಳಿದರು. ನಾವು ಡ್ರಾಗನ್ ಫ್ರೂಟ್, ಮಂಗಳೂರು ಹಾಗಲಕಾಯಿ... ಹೀಗಿ ಹೊಸ ತರಕಾರಿಗಳನ್ನು ನೋಡಿದೆವು. ಅಲ್ಲಿ ನಾವು ಲಕ್ಷ್ಮೀ ಕೂರಿಸಿದ್ದನ್ನು ನೋಡಿದೆವು. ಪೊಲೀಸರನ್ನು ಮಾತಾಡಿಸಿದೆವು.



ಬಾಳೆಕಾಯಿಯನ್ನು ಹೇಗೆ ಹಣ್ಣು ಮಾಡುತ್ತಾರೆ ಎಂಬುದನ್ನು ತಿಳಿದುಕೊಂಡೆವು. ಆ ಮಾರುಕಟ್ಟೆಯಲ್ಲಿ ಒಂದು ಕಡೆ ಹೂವಿನ ಅಂಗಡಿ, ಒಂದು ಕಡೆ ತರಕಾರಿ ಅಂಗಡಿ, ಒಂದು ಕಡೆ ಬಳೆ ಅಂಗಡಿ, ಬರೀ ಬಾಳೆಹಣ್ಣಿನ ಅಂಗಡಿ ಇತ್ತು. ಒಂದೇ ಕಡೆ ಇಷ್ಟೆಲ್ಲ ಮಾರುತಿದ್ದರು. ನಂತರ ಚಾಮುಂಡಿ ವಿಹಾರ ಕ್ರೀಡಾಂಗಣಕ್ಕೆ ಹೋದೆವು. ಅಲ್ಲಿ ಹಾಕಿ ಮೈದಾನ, ವಾಲಿಬಾಲ್, ಬ್ಯಾಸ್ಕೆಟ್ ಬಾಲ್, ಓಟದ ಸ್ಪರ್ಧೆಯ ಮೈದಾನ ಹೀಗೆ ಒಂದೇ ಸ್ಥಳದಲ್ಲಿ ಎಷ್ಟೊಂದು ಬೇರೆ ಬೇರೆ ಆಟದ ಮೈದಾನಗಳಿದ್ದವು. ನಮಗೆಲ್ಲರಿಗೂ ಜಿಮ್ನಾಸ್ಟಿಕ್ ಹೇಳಿಕೊಡುವ ಜಾಗ ತುಂಬಾ ಇಷ್ಟವಾಯಿತು. ಏಕೆಂ ದರೆ ಮೆತ್ತಗಿದ್ದ ನೆಲದ ಮೇಲೆ ಕುಣಿತು, ಕುಣಿದು ಎಲ್ಲರೂ ಆಟವಾಡಿದೆವು. ಎಲ್ಲರಿಗೂ ಇನ್ನೂ ಸ್ವಲ್ಪ ಹೊತ್ತು ಆಟ ವಾಡಲು ಇಷ್ಟವಿತ್ತು, ಆದರೆ ಅಕ್ಕ ಹೊರಡುವ ಸಮಯ ವಾಗಿದೆ ಎಂದರು. ಯಾರಿಗೂ ಶಾಲೆಗೆ ಬರುವ ಮನಸ್ಸೇ ಇರಲಿಲ್ಲ. ಈ ಭೇಟಿ ನಮಗೆಲ್ಲರಿಗೂ ಇಷ್ಟ ವಾಯಿತು.





–ಆದ್ಯ ಮತ್ತು ಸಿಂಧು, ೨ನೇ ತರಗತಿ

## ಸೆಪ್ಟೆಂಬರ್‌ನಲ್ಲಿ ಶಾಲೆಗೆ ಭೇಟಿ ಕೊಟ್ಟವರು

೧. ಜಿ. ವೈದೇಹಿ, ನಿವೃತ್ತ ಶಿಕ್ಷಕಿ
೨. ಅಶೋಕ್‌ಕುಮಾರ್, ಸಮಾಜ ಕಾರ್ಯಕರ್ತರು
೩. ಡಿ.ಸೆಂದಿಲ್ ನಟರಾಜನ್ ಮತ್ತು ಐ. ಸುಕನ್ಯಾ ದೇವಿ, ಶಿಕ್ಷಕರು, ತಮಿಳುನಾಡು ಸುದರ್ಶನ್ ಐಯ್ಯಂಗಾರ್, ಪ್ರೊಫೆಸರ್, ಐ.ಐ.ಟಿ.
೪. ಕೇಶವಮೂರ್ತಿ ಕೆ.ಎನ್., ಸಾಫ್ಟ್‌ವೇರ್ ಇಂಜಿನಿಯರ್
೫. ಶಶಿಕಲಾ ಪಾಟೀಲ್, ನರ್ಸರಿ ಟೀಚರ್
೬. ವಿಜಯಲಕ್ಷ್ಮೀ ಬಸವರಾಜ್, ಆಡಳಿತಾಧಿಕಾರಿ
೭. ಮಧುಸೂದನ್ ವಿ.ಡಿ., ರಂಗಭೂಮಿ
೮. ಸದಾನಂದಮೂರ್ತಿ, ಶಿಕ್ಷಕರು
೯. ನಂದಿನಿ ಬಿ.ಎಸ್., ಶಿಕ್ಷಕಿ
೧೦. ವಾಸುದೇವರಾವ್, ಕಾರ್ಯದರ್ಶಿ, ಸೇವಾಭಾರತಿ ಶಿಕ್ಷಣ ಸಂಸ್ಥೆ
೧೧. ಡಾ.ನಾಗರಾಜ್ ಡಿ.ಜಿ., ಆರೋಗ್ಯಾಧಿಕಾರಿ, ನಗರಪಾಲಿಕೆ
೧೨. ದರ್ಶನ್ ಪುಟ್ಟಣ್ಣಯ್ಯ, ಇಂಜಿನಿಯರ್ ಹಾಗೂ ಯುವ ರೈತ ನಾಯಕರು
೧೩. ರವಿ ಹಂಚ್, Businesss Advisory Consultant
೧೪. ಅಶ್ವಿನ್ ಜೀವನ, Accupuncturist
೧೫. ಸುದರ್ಶನ್ ಎಸ್., V – LEAD
೧೬. ನಿವೇದಿತಾ, ಪಾಲ್ ಜಗದೀಶ್, ಶಿಕ್ಷಕರು
೧೭. ರಜನಿನಾಯಕ್, ಶಿಕ್ಷಕರು
೧೮. ಲಕ್ಷ್ಮಣ್ ಬಾದಾಮಿ, ವನ್ನೆಸ್ಸಾ ಜ್ವಿಕ್, Eco Architect
೧೯. ಅನಂತ ಶರ್ಮ ಬಿ.ಜಿ., Assistant professor
೨೦. ದಿವ್ಯ ಬಿ.ಎ., Tulasi kindergarten

## ಡಿಡಿಪಿಐ, ಬಿಇಒ ಮೆಚ್ಚುಗೆ

ಮೊದಲ ಪುಟದಿಂದ.....

ಖುಷಿ ತಂದಿದೆ ಎಂದು ಅವರು ತಮ್ಮ ಅನಿಸಿಕೆ ಹಂಚಿಕೊಂಡರು. ಶಿಕ್ಷಕರೊಡನೆ ಆತ್ಮೀಯವಾಗಿ ಮಾತನಾಡಿದ ಅಧಿಕಾರಿಗಳು, ಮಕ್ಕಳ ಆತ್ಮವಿಶ್ವಾಸದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಅಲ್ಲದೆ, ಮಕ್ಕಳ ಸರ್ವಾಂಗೀಣ ಬೆಳವಣಿಗೆಗೆ ದುಡಿಯುತ್ತಿರುವ ಇಂತಹ ಶಾಲೆಗೆ ತಮ್ಮ ಇಲಾಖೆಯಿಂದ ಅಗತ್ಯ ಸೌಲಭ್ಯ ಹಾಗೂ ಸಹಕಾರ ನೀಡುವುದಾಗಿ ಭರವಸೆ ಇತ್ತರು.

## ಬದ್ಧತೆ, ಆಸಕ್ತಿಯಿಂದ ಈಜು ಕಲಿತ ಚಿಣ್ಣರು

ಮೊದಲ ಪುಟದಿಂದ.....

ಕೆಲವು ದಿನಗಳಲ್ಲಿ ಮಳೆ ಬರುತ್ತಿದ್ದರೂ ಮಕ್ಕಳು ಈಜುತ್ತಿದ್ದುದು, ಕಲಿಕೆಯೆಡೆಗಿನ ಅವರ ಬದ್ಧತೆ ಮತ್ತು ಆಸಕ್ತಿಯನ್ನು ತೋರುತ್ತಿತ್ತು. ಕಲಿಸುವವರಲ್ಲಿ ಸ್ಪಷ್ಟತೆ ಮತ್ತು ವಿಶ್ವಾಸವಿದ್ದರೆ, ಯಾವ ಗೊಂದಲವೂ ಇಲ್ಲದೆ ಕಲಿಸಬಹುದು ಮತ್ತು ಕಲಿಯಬಹುದು ಎಂಬುದನ್ನು ಈ ಈಜು ತರಬೇತಿಯಲ್ಲಿ ನಾನು ಕಂಡುಕೊಂಡೆ.

– ಸವಿತಾ ಬಿ., ಶಿಕ್ಷಕಿ



## ಬಂಗಾರಕ್ಕಿಂತ ಬಂಗಾರ

**ಕಥೆ**

ಲಕುಮಿ–ಹನುಮಿ ಒಂದೇ ಊರಿನವರು. ಅವರು ಗೆಳತಿಯರು. ಚಿಕ್ಕಂದಿನಿಂದಲೂ ಜೊತೆಯಾಗಿ ಆಡಿ ಬೆಳೆದವರು. ಲಕುಮಿ ಸಾಹುಕಾರನ ಮಗಳು. ಹನುಮಿ ಬಡವರ ಮಗಳು. ಹೀಗೆ ಅವರು ಬೆಳೆದು ದೊಡ್ಡವರಾದರು. ಬೆಳೆದ ಹುಡುಗಿಯರಿಗೆ ಅವರವರ ಮನೆಯಲ್ಲಿ ಗಂಡು ಹುಡುಕಿದರು. ಲಕುಮಿಗೂ–ಹನುಮಿಗೂ ಒಂದೇ ಊರಿನ ಹುಡುಗರು ದೊರೆತರು. ಲಕುಮಿಗೂ–ಹನುಮಿಗೂ ಖುಷಿಯೋ ಖುಷಿ. ಲಕುಮಿಯ ಮದುವೆ ಧಾಂ ಧೂಂ ಆಗಿ ನಡೆಯಿತು. ಹನುಮಿಯ ಮದುವೆ ಸರಳವಾಗಿ ನಡೆಯಿತು. ಆದರೂ ಇಬ್ಬರ ಜೀವನವೂ ಬಂಗಾರದಂತೆ ಚೆನ್ನಾಗಿ ಆಯಿತು.

– ಕೀರ್ತಿ, ೨ನೇ ತರಗತಿ

# My first Indian Festival

On Sunday the 8. of September I attended a Ganesha festival celebration. Suman akka had invited me for the final ceremony, where there is a procession and the Ganesha statue is carried to the water. This function was not only my first Ganesha celebration, but also the first Indian festival I ever attended, so I was really excited and did not really know what to expect. I came with Savitha akka and her family, who kindly picked me up at my home, and when we arrived we first went to Vibhu's (7th std.) house. They already had a lot of visitors from the neighbourhood and we got very nice food there. They also showed me the men who were dressing up as the guards of Ganesha on the first floor, so I was able to "look behind the scenes" as well.When the ceremony started I was almost overwhelmed because there was so much to see! There was a group playing some really loud music, another group who was dancing and dressed up as peacocks and other creatures and another group of dancers with small drums. Everyone was happy and dancing and making a lot of noise and I really enjoyed this colourful and happy crowd, because I had never experienced anything like that. When Ganesha’s statue was placed on the waiting car and the guards of Ganesha arrived, the procession started. They slowly moved down the entire street, stopping from time to time for the guards to dance or perform with their sabors. In front of Vibhu's house they had a special performance with fire. It was really impressive and in the end one of the guards even cut coconuts that were thrown at him with his sabor! After that the procession moved on to the water but it was too far away so we didn't come along. During all of this I felt really happy and lucky to be able to experience something like that. It was a cultural event that you only get the chance to attend once a year. Foreign people like me rarely get that chance even once in their life so I felt really thankful that Suman akka and her family and all the other people who were there made that possible for me. I was once again blown away by the kindness of everyone and how open everyone was. I enjoyed talking to some neighbours and feeling so welcome and it is truly an experience I will always appreciate and not forget for a long time.





**-Johanna Tillack,** German Volunteer.

# आहा.......मुंबई


मै दसरा छुट्टियों मे पहली बार दसरा उत्सव देखा . आयुद पूजा के बाद रिश्तेदारों के सात मै और मेरी माँ सब पूने, महाबलेश्वर गए थे . महाबलेश्वर मे टेबल लैंड , अतुर पाईंट , महाबलेश्वर का मंदिर और माप्रो बगीचा गए थे .उसके बाद अगले दिन प्रताप गड देखकर आलीबाग समुद्र में खेलकर मुंबई समुद्र किनारे गए थे .मुंबई में पहले गेट वे आफ इंडिया और ताज होटल देखा .ताज होटल छब्बीस नवंबर दो हज़ार आठ में आतंकी हमला हवा था .अब ताज होटल बहुत अच्छा है .अगले दिन मेरी माँ का जन्म दिन था ,तो मुंबई के लक्ष्मी मंदिर गए थे . वहाँ से हम अजंता एल्लोरा गुफाए , मरीना समुद्र किनारे देखकर मंबई में खरीददारी कर लोनावाला गए .अगले दिन बुशी बांध , लायन पॉइंट और लोनावाला गड देखकर और ट्रेकिंग कर पूने हवाई अड्डा आये और हवाई जहाज से बेंगलुरू, वहाँ से मैसूरू आगये .इस बार की छुट्टी मज़ेदार था .





**-दवलचंद्र,** आठवी कक्षा

# Shikar Dhawan



Shikar Dhawan is a batsman who plays cricket. He is a left handed batsman and good all rounder. Raveendra Jadeja is also a good all rounder. He has scored almost 8,000 runs. Once during, India Vs Australia match he was injured by the bowling of Zampa. Shikar Dhawan played only 4-5 matches. In these 4-5 matches he did not perform well. He was an opening batsman with Rohit Sharma. I am his fan and I like to become left hand batsman like Shikar Dhawan.




**-Shaan Gowda S.N.,** 5th Standard.

# Save Tigers

Every year the Tiger day is held on 29th of July. In the year 2019 the tigers’ count was 2,967 when compared 2,014 in the year 2014 in India. I was so happy that the population has been raised. Friends let us protect tigers and conserve biodiversity.

**-Adithya N,** Standard 5





# Mani, the Crow

There was a crow named Mani . She likes to eat papaya. One day she saw a parrot named Rani . Rani, the Parrot was so beautiful. She had a red beak. Mani was jealous. Next day Mani saw a baby parrot struggling to fly. Mani, the crow, helped him. Mani taught him to fly. Baby Parrot learnt to fly and both Mani and the baby parrot went to sky.

**-Mythri,** 5th Standard



# Scientists from RMNH



I am very happy with this programme of Bio diversity conducted by Regional museum of Natural History scientists . Indresh Anna told us about biodiversity. Another scientist told us about birds particularly about water birds. He also told us about migratory birds and why it comes to southern part. We also came to know about some plants and trees names in our school campus with their scientific classification. It was interesting to know their scientific names. We saw some birds and also spiders. After this we all assembled in resource centre and discussed about our learning and thanked the resource persons of RMNH.



**-Gaurav,** 10th Standard